## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1944 |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಂ.ರಮೇಶ ಗೌಡ |
| ಉತ್ತರಿಸಬೇಕಾದ ದಿನಾಂಕ | : | 26.03.2020 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಸರಗಳ್ಳತನ, ಬೈಕ್ ಹಾಗೂ ಕಾರ್ ಕಳ್ಳತನಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ಸರಗಳ್ಳರ, ವಾಹನಗಳ್ಳರ ಹಾವಳಿ ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು; | ಸರಗಳ್ಳರ, ವಾಹನಗಳ್ಳರ ಹಾವಳಿ ತಡೆಗಟ್ಟಲು ಕೈಗೊಂಡ ಕ್ರಮಗಳು ಈ ಕೆಳಕಂಡಂತಿದೆ:-<br><br>1) ಬೆಂಗಳೂರು ನಗರದ ಠಾಣಾ ಸರಹದ್ದಿನಲ್ಲಿ ಅಪರಾಧ ಘಟಿಸುವ ಪ್ರದೇಶಗಳನ್ನು ಗುರ್ತಿಸಿ ಬ್ಯಾರಿಕೇಡ್‌ಗಳ ಸಹಾಯದಿಂದ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ಅಧಿಕಾರಿ ಮತ್ತು ಸಿಬ್ಬಂದಿಯವರುಗಳನ್ನು ಬೆಳಿಗ್ಗೆ 6-00 ರಿಂದ 8-30 ರವರೆಗೆ ಮತ್ತು ಸಂಜೆ 6.00 ರಿಂದ 8.30 ಗಂಟೆಯವರೆಗೆ ಕರ್ತವ್ಯಕ್ಕೆ ನಿಯೋಜಿಸಿಕೊಂಡು ವಾಹನ ತಪಾಸಣೆ ಕೈಗೊಳ್ಳಲಾಗುತ್ತಿದೆ.<br><br>2) ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕರಪತ್ರಗಳನ್ನು ಹಂಚಿಕೆ ಮಾಡಲಾಗಿದ್ದು, ಜನ ಸಂಪರ್ಕ ಸಭೆಗಳನ್ನು ಠಾಣಾ ಮಟ್ಟದಲ್ಲಿ, ಉಪ ವಿಭಾಗ ಮಟ್ಟದಲ್ಲಿ ಏರ್ಪಡಿಸಲಾಗಿದೆ.<br><br>3) ಠಾಣೆಯ ಎಲ್ಲಾ ಬೀಟ್‌ಗಳನ್ನು ಉಪ ಬೀಟ್‌ಗಳನ್ನಾಗಿ ವಿಂಗಡಿಸಿ ಲಭ್ಯವಿರುವ ಸಿಬ್ಬಂದಿಯವರನ್ನು ಪ್ರತಿಯೊಂದು ಉಪ ಬೀಟ್‌ಗಳಿಗೆ ನಿಯೋಜಿಸಲಾಿದೆ.<br><br>4) ಸಾರ್ವಜನಿಕರು ಹೆಚ್ಚಾಗಿ ಸೇರುವ ಸ್ಥಳಗಳಲ್ಲಿ ಚೀತಾ, ಹೊಯ್ಸಳ ವಾಹನಗಳ ಗಸ್ತನ್ನು ಹೆಚ್ಚಿಸಲಾಗಿದೆ. ಹಾಗೂ ಮೆಗಾ ಪೋನ್ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ.<br><br>5) ಸರಗಳ್ಳತನ ಪ್ರಕರಣಗಳ ಎಂ.ಓ ಆಸಾಮಿಗಳ ಚಟುವಟಿಕೆಗಳ ಮೇಲೆ ನಿಗಾವಹಿಸಿ ಮಾಹಿತಿ ಸಂಗ್ರಹಿಸುತ್ತಿದ್ದು, ಸಕ್ರಿಯ ಎಂ.ಓ. ಆಸಾಮಿಗಳ ವಿರುದ್ಧ ಭದ್ರತಾ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ. ಠಾಣಾ ಸರಹದ್ದಿನಲ್ಲಿ ವಾಸಿಸುತ್ತಿರುವ ಸರಗಳ್ಳತನ ಎಂ.ಓ. ಆಸಾಮಿಗಳ ಚಲನ ವಲನಗಳ ಮೇಲೆ ನಿಗಾ ಇಡುವಂತೆ ಬೀಟ್ ಮತ್ತು ಅಪರಾಧ ಸಿಬ್ಬಂದಿಯವರಿಗೆ ಸೂಚನೆಗಳನ್ನು ನೀಡಲಾಗುತ್ತಿದೆ.<br><br>6) ಸರಹದ್ದುಗಳಿಗೆ ಹೊಯ್ಸಳ, ಚೀತಾ ವಾಹನಗಳಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರುಗಳನ್ನು ರೌಂಡ್ಸ್ ಮಾಡಲು ನೇಮಕ ಮಾಡಲಾಗುತ್ತಿದ್ದು, ಸಾರ್ವಜನಿಕರುಗಳಿಗೆ ವಿಶೇಷವಾಗಿ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ರಕ್ಷಣೆಯನ್ನು ಒದಗಿಸಲಾಗುತ್ತಿದೆ. ಮಹಿಳೆಯರಿಗಾಗಿ ಅಭಯ ವಾಹನವನ್ನು ಗಸ್ತು ಮಾಡಲು |

| | | |
|---|---|---|
| | | ಮಹಿಳಾ ಸಿಬ್ಬಂದಿಯವರುಗಳೊಂದಿಗೆ ನಿಯೋಜಿಸಲಾಗುತ್ತಿದ್ದು, ಮಹಿಳೆಯರಿಗೆ ಸೂಕ್ತ ರಕ್ಷಣೆಯನ್ನು ಒದಗಿಸಲಾಗುತ್ತಿದೆ.<br>**7)** ಸರಹದ್ದಿನಲ್ಲಿ ಅಪರಾಧಗಳು ನಡೆಯಬಹುದೆಂದು ಅನುಮಾನ ಕಂಡುಬರುವ ಸ್ಥಳಗಳಲ್ಲಿ ಸಿಬ್ಬಂದಿಯವರುಗಳನ್ನು ಪಾಯಿಂಟ್ ಕರ್ತವ್ಯಕ್ಕೆ ನಿಯೋಜನೆ ಮಾಡುವುದರ ಮೂಲಕ ಅಪರಾಧಗಳನ್ನು ತಡೆಗಟ್ಟುವುದಲ್ಲದೆ, ಸರಹದ್ದಿನ ಆಯಕಟ್ಟಿನ ಸ್ಥಳಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮರಾಗಳನ್ನು ಅಳವಡಿಸಿಕೊಂಡು ಕರ್ತವ್ಯವನ್ನು ನಿರ್ವಹಿಸಲಾಗುತ್ತಿದೆ. |
| ಇ) | ಬೆಂಗಳೂರು ನಗರದ ಸುತ್ತಮುತ್ತಲು ಪೋಲೀಸ್ ಬೀಟ್‌ಗಳು ಪರಿಣಾಮಕಾರಿಯಿಂದ ಕೂಡಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಪೋಲೀಸ್ ಬೀಟ್‌ಗಳು ಇವೆ; (ಸಮಯ ಸಮೇತ ಮಾಹಿತಿ ನೀಡುವುದು) | ಬೆಂಗಳೂರು ನಗರದ ಸುತ್ತಮುತ್ತಲು ಪೋಲೀಸ್ ಬೀಟ್‌ಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ.<br>ಪ್ರತಿ ಪೋಲೀಸ್ ಠಾಣೆಯಲ್ಲಿ ಲಭ್ಯವಿರುವ ಸಿಬ್ಬಂದಿಗಳಿಗೆ ಅನುಗುಣವಾಗಿ ಬೀಟ್ ಸಂಖ್ಯೆಗಳನ್ನು ನಿಗದಿಪಡಿಸಿಕೊಂಡು ಪ್ರತಿ ಬೀಟ್‌ಗೆ ಒಬ್ಬ ಹೆಡ್‌ಕಾನ್‌ಸ್ಟೇಬಲ್ ಅಥವಾ ಪೋಲೀಸ್ ಕಾನ್‌ಸ್ಟೇಬಲ್‌ನ್ನು ನಿಯೋಜಿಸಲಾಗಿರುತ್ತದೆ ಹಾಗೂ ಬೆಳಿಗ್ಗೆ 08:00 ರಿಂದ ರಾತ್ರಿ 08:00 ರವರೆಗೆ ರಾತ್ರಿ 08.00 ರಿಂದ ಬೆಳಿಗ್ಗೆ 08.00 ರವರೆಗೆ ಅಧಿಕಾರಿ/ಸಿಬ್ಬಂದಿಗಳಿಗೆ 02 ಪಾಳಿಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಿ ಸಮಯ ನಿಗಧಿಪಡಿಸಲಾಗಿರುತ್ತದೆ. ನಿಗಧಿಗೊಳಿಸಲಾದ ಬೀಟ್‌ಗಳ ಠಾಣೆವಾರು ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಲಾಗಿದೆ. |
| ಈ) | ಈ ರೀತಿಯ ಕಳ್ಳತನವನ್ನು ನಿಯಂತ್ರಣದಲ್ಲಿಡಲು ಬೆಂಗಳೂರು ನಗರದ ಸುತ್ತಮುತ್ತಲು ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲಾಗಿದೆಯೇ; ಹಾಗಿದ್ದಲ್ಲಿ, ಸಿ.ಸಿ. ಕ್ಯಾಮರಾಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ; ಅನೇಕ ಕಡೆ ಸಿ.ಸಿ. ಕ್ಯಾಮರಾಗಳಲ್ಲಿ ದಾಖಲಾತಿಗಳು ಉಳಿಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಬೆಂಗಳೂರು ನಗರದ ವಿವಿಧ ಪೋಲೀಸ್ ಠಾಣಾ ಪ್ರಮುಖ ಸರಹದ್ದುಗಳಲ್ಲಿ ಒಟ್ಟು 3590 ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಿದ್ದು, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಾಗುತ್ತಿದೆ. ಇನ್ನೂ ಹಲವಾರು ಸ್ಥಳಗಳಲ್ಲಿ ಅಳವಡಿಸುವ ಬಗ್ಗೆ ಕ್ರಮ ಚಾಲ್ತಿಯಲ್ಲಿರುತ್ತದೆ.<br>ಸಿ.ಸಿ. ಕ್ಯಾಮೆರಾಗಳಲ್ಲಿ ದಾಖಲಾತಿಗಳು ಉಳಿಯದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಉ) | ಅದರಂತೆ ಬೆಂಗಳೂರು ನಗರದಲ್ಲಿ ವೀಲಿಂಗ್ ಪುಂಡಾಟ ದಿನದಿಂದ ದಿನಕ್ಕೆ ವಿಶೇಷವಾಗಿ ರಜಾ ಸಮಯದಲ್ಲಿ ಮತ್ತು ರಾತ್ರಿ ಪಾಳಿಯದಲ್ಲಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ಕಳೆದ ಮೂರು ವರ್ಷಗಳಲ್ಲಿ ವೀಲಿಂಗ್/ಡ್ರ್ಯಾಗ್ ರೇಸ್‌ನಲ್ಲಿ ತೊಡಗಿಕೊಂಡಿರುವವರ ವಿರುದ್ಧ ಸಂಚಾರ ವಿಭಾಗಗಳಲ್ಲಿ ದಾಖಲಾಗಿರುವ ಪ್ರಕರಣಗಳ ವಿವರಗಳು ಕೆಳಕಂಡಂತಿವೆ:- |

| ವರ್ಷ | ದಾಖಲಿಸಿರುವ ಪ್ರಕರಣಗಳು | | ಒಟ್ಟು ಪ್ರಕರಣಗಳು |
|---|---|---|---|
| | ಕಲಂ 189 ಐಎಂವಿ ಕಾಯ್ದೆ ಅಡಿಯಲ್ಲಿ | ಕಲಂ 279 ಐಪಿಸಿ ಅಡಿಯಲ್ಲಿ | |
| 2017 | 168 | 138 | 306 |
| 2018 | 79 | 275 | 354 |
| 2019 | 38 | 153 | 191 |
| 2020 (ಫೆಬ್ರವರಿ) | 5 | 127 | 132 |

| | | |
|---|---|---|
| ಊ) | ವೀಲಿಂಗ್ ಮಾಡುವವರನ್ನು ನಿಯಂತ್ರಣದಲ್ಲಿಡಲು ಸರ್ಕಾರವು ಕೈಗೊಂಡ ಕ್ರಮಗಳೇನು? | ಬೆಂಗಳೂರು ನಗರದಲ್ಲಿ ವೀಲಿಂಗ್ ಮತ್ತು ಡ್ರ್ಯಾಗ್ ರೇಸ್ ಮಾಡುವವರನ್ನು ನಿಯಂತ್ರಣದಲ್ಲಿಡಲು ಕಾನೂನಿನ ಅಡಿಯಲ್ಲಿ ಈ ಕೆಳಕಂಡ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1) ಡ್ರ್ಯಾಗ್ ರೇಸ್ ಮಾಡುವಾಗ ಪೊಲೀಸರ ಕೈಗೆ ಸಿಕ್ಕಿಬಿದ್ದರೆ ಅಂತಹವರ ವಿರುದ್ಧ ಕಲಂ 189 ಐ.ಎಂ.ವಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗುತ್ತಿದೆ. ಅಂತಹ ವಾಹನವನ್ನು ಮತ್ತು ಚಾಲನಾ ಪರವಾನಿಗೆಯನ್ನು ವಶಪಡಿಸಿಕೊಂಡು ಪರವಾನಿಗೆಯನ್ನು ಅಮಾನತ್ತಿಗಾಗಿ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗೆ ಕಳುಹಿಸಿಕೊಡಲಾಗುತ್ತಿದೆ. ಪೋಷಕರನ್ನು ಕರೆಯಿಸಿ ಮಕ್ಕಳಿಗೆ ಈ ರೀತಿಯ ದುಸ್ಸಾಹಸ ಮಾಡಿ ಅನಾಹುತ ಉಂಟು ಮಾಡದಂತೆ ಸೂಕ್ತ ಬುದ್ಧಿವಾದ ಹೇಳಲು ತಿಳಿ ಹೇಳಲಾಗುತ್ತಿದೆ.<br><br>2) ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಈ ಹಾವಳಿಯನ್ನು ತಪ್ಪಿಸಲು ವೀಲಿಂಗ್ ಮತ್ತು ಡ್ರ್ಯಾಗ್ ರೇಸ್‌ನಲ್ಲಿ ತೊಡಗಿಸಿಕೊಂಡವರ ವಿರುದ್ಧ ಅಜಾಗರೂಕತೆ ಹಾಗೂ ನಿರ್ಲಕ್ಷ ಚಾಲನೆಯಡಿ ಐಪಿಸಿ ಸೆಕ್ಷನ್ 279 ರಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.<br><br>3) ಹಬ್ಬ ಹರಿದಿನಗಳಲ್ಲಿ ಹಾಗೂ ರಜಾ ದಿನಗಳಲ್ಲಿ ಡ್ರ್ಯಾಗ್ ರೇಸ್ ನಡೆಯುವ ಸಾಧ್ಯತೆಗಳಿದ್ದು, ಆ ದಿನಗಳಲ್ಲಿ ವಿಶೇಷ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>4) ಯಾವುದೇ ವ್ಯಕ್ತಿ ವೀಲಿಂಗ್ ಮತ್ತು ಡ್ರ್ಯಾಗ್ ರೇಸ್‌ನಲ್ಲಿ ತೊಡಗಿರುವುದು ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲು ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಸೂಚಿಸಲಾಗಿದೆ ಹಾಗೂ ಈ ಅಪರಾಧ ಅಡಿಯಲ್ಲಿ ಭಾಗಿಯಾಗಿರುವವರ ವಿರುದ್ಧ ವಿಶೇಷ ಗಮನಹರಿಸಲು ತಿಳಿಸಲಾಗಿದೆ. |

ಹೆಚ್‌ಡಿ 1 ಕೆಎಎ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

## ಅನುಬಂಧ-1

1) ಬೀಟ್‌ಗೆ ಹಂಚಿಕೆ ಮಾಡಲಾದ ಹೆಡ್‌ಕಾನ್ಸ್‌ಟೇಬಲ್ ಅಥವಾ ಪೊಲೀಸ್ ಕಾನ್ಸ್‌ಟೇಬಲ್ ಬೀಟ್ ಕಾರ್ಯದೊಂದಿಗೆ ಇತರೆ ದಿನನಿತ್ಯದ ಪೊಲೀಸ್ ಕರ್ತವ್ಯಗಳನ್ನೂ ಸಹ ನಿರ್ವಹಿಸಬೇಕಾಗಿರುತ್ತದೆ.

2) ಪ್ರತಿ ಬೀಟ್‌ಗೆ ಹೆಡ್‌ಕಾನ್ಸ್‌ಟೇಬಲ್ ಅಥವಾ ಪೊಲೀಸ್ ಕಾನ್ಸ್‌ಟೇಬಲ್ ರವರುಗಳನ್ನು ಕನಿಷ್ಠ ಒಂದು ವರ್ಷದ ಅವಧಿಗೆ ನಿಯೋಜಿಸಿ ಎಲ್ಲಾ ಬೀಟ್‌ಗಳು ಒಂದು ತಿಂಗಳಲ್ಲಿ ಕನಿಷ್ಟ ಎರಡು ಬಾರಿಗೆ ನಿಗದಿತ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳಲಾಗುತ್ತಿದೆ.

3) ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಮಯದಲ್ಲಿ ರಕ್ಷಣಾ ಕಾರ್ಯ ನಿರ್ವಹಣೆಯ ಸಂದರ್ಭದಲ್ಲಿ ರಾತ್ರಿ ವೇಳೆಯಲ್ಲಿ ಬೀಟ್ ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಸ್ಥಳೀಯ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಕನಿಷ್ಟ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಬೀಟ್ ವ್ಯವಸ್ಥೆಯನ್ನು ಮಾಡಲಾಗುತ್ತದೆ.

4) ಸುಧಾರಿತ ಪೊಲೀಸ್ ಬೀಟ್ ಗಸ್ತು ವ್ಯವಸ್ಥೆಗೆ ಪೊಲೀಸ್ ಕಾನ್ಸ್‌ಟೇಬಲ್-ಹೆಡ್ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡಿಕೊಂಡು ನಾಮಫಲಕವನ್ನು ಅಳವಡಿಸಿಕೊಂಡು ನಿರ್ವಹಣೆ ಮಾಡಲಾಗುತ್ತಿದೆ. ಪೊಲೀಸ್ ಠಾಣಾ ಸರಹದ್ದಿನ ಸುಧಾರಿತ ಪೊಲೀಸ್ ಬೀಟ್ ಗಸ್ತು ವ್ಯವಸ್ಥೆಯ ನಕ್ಷೆಯನ್ನು ರಚನೆ ಮಾಡಿ ಠಾಣೆಯಲ್ಲಿ ಅಳವಡಿಸಿಕೊಂಡು ನಿರ್ವಹಣೆ ಮಾಡಲಾಗುತ್ತಿದೆ. ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ರವರಿಗೆ ಬೀಟ್ ಪುಸ್ತಕಗಳನ್ನು ನೀಡಿ ನಿರ್ವಹಣೆ ಮಾಡಲಾಗುತ್ತಿದೆ.

5) ಪೊಲೀಸ್ ಸಬ್-ಇನ್ಸ್‌ಪೆಕ್ಟರ್, ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಸಹಾಯಕ ಪೊಲೀಸ್ ಆಯುಕ್ತರುಗಳು ಸಂಕ್ಷಿಪ್ತವಾಗಿ ಸುಧಾರಿತ ಪೊಲೀಸ್ ಬೀಟ್ ಗಸ್ತು ವ್ಯವಸ್ಥೆ ನಿರ್ವಹಣೆ ಮಾಡಿ, ವಿಶೇಷ ಸಭೆಯನ್ನು ಕರೆದು ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿರುತ್ತದೆ. ಹಾಗೂ ಹೊಸ ಬೀಟ್ ವ್ಯವಸ್ಥೆಯನ್ನು ರಚನೆ ಮಾಡಿರುವ ವೆಬ್‌ಸೈಟ್‌ನಲ್ಲಿ ಹಾಕುವಂತೆ ಸೂಚಿಸಲಾಗಿರುತ್ತದೆ.

6) ಪೊಲೀಸ್ ಠಾಣೆಗಳ ಠಾಣಾ ಸರಹದ್ದಿನಲ್ಲಿ ಹೆಚ್ಚು ಅಪರಾಧ ನಡೆಯುವ ಬೀಟ್ ಮತ್ತು ಉಪ-ಬೀಟ್‌ನಲ್ಲಿ ಸಿಬ್ಬಂದಿಗಳಿಗೆ ಹೆಚ್ಚಿಗೆ ಗಸ್ತು ಮಾಡಲು ಹಾಗೂ ಪಾಯಿಂಟ್‌ಗಳನ್ನು ಹಾಕಿ ಸೂಕ್ತ ತಿಳುವಳಿಕೆ ನೀಡಿ ನೇಮಕ ಮಾಡಲಾಗಿರುತ್ತದೆ. ವಾಹನ ಕಳ್ಳತನ ಹಾಗೂ ಇತರೆ ಅಪರಾಧಗಳನ್ನು ತಡೆಗಟ್ಟಲು ವಾಹನ ತಪಾಸಣೆ ಮಾಡಲು ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಚಿಸಲಾಗಿರುತ್ತದೆ.

7) ಅಪರಾಧ ತಡೆಗಟ್ಟಲು ಮುಂಜಾಗ್ರತೆ ವಹಿಸುವಂತೆ ಸಾರ್ವಜನಿಕರಿಗೆ ಪಾಂಪ್ಲೆಟ್ಸ್ ಮತ್ತು ಜನ ಸಂಪರ್ಕ ಸಭೆಯಲ್ಲಿ ತಿಳಿಸಲಾಗಿರುತ್ತದೆ. ಅಪರಾಧ ತಡೆಗಟ್ಟಲು ಬೀಗ ಹಾಕಿರುವ ಮನೆಗಳ ಬಗ್ಗೆ ಹೆಚ್ಚಿನ ನಿಗಾವಹಿಸಿ ಗಸ್ತು ಮಾಡುವಂತೆ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಯವರಿಗೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.

8) ವಾಹನಗಳ ಕಳ್ಳತನ ತಡೆಗಟ್ಟಲು ವಾಹನದ ಮಾಲೀಕರಿಗೆ ವಾಹನಗಳಿಗೆ ಬೀಗ ಹಾಕಿ ಕಾಂಪೌಂಡ್/ಶೆಡ್ ಒಳಗಡೆ ನಿಲ್ಲಿಸಿಕೊಳ್ಳುವಂತೆ ಸಭೆಗಳಲ್ಲಿ ಸೂಚಿಸಲಾಗಿರುತ್ತದೆ ಹಾಗೂ ಯಾವ ದಿನಗಳಲ್ಲಿ ಹೆಚ್ಚಿಗೆ ಅಪರಾಧ

ನಡೆಯುತ್ತದೆಯೋ ಸದರಿ ದಿನಗಳಲ್ಲಿ ವಿಶೇಷ ರಾತ್ರಿ ಗಸ್ತು ಮಾಡಲು ಕ್ರಮ ಕೈಗೊಳ್ಳಲಾಗಿರುತ್ತದೆ. ಅಪರಾಧ ತಡೆಗಟ್ಟಲು ಬಿತ್ತಿ ಪತ್ರಗಳನ್ನು ಅಂಟಿಸಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿರುತ್ತದೆ.

9) ಪೊಲೀಸ್ ಠಾಣೆಗಳಲ್ಲಿ ಎಂ.ಓ ಆಸಾಮಿಗಳನ್ನು ಪತ್ತೆಮಾಡಿ ಠಾಣೆಗೆ ಕರೆತಂದು ಕೂಲಂಕುಶವಾಗಿ ವಿಚಾರಣೆಗೊಳಪಡಿಸಲಾಗುತ್ತಿದೆ. ಠಾಣೆಯಲ್ಲಿರುವ ಎಂ.ಓ.ಬಿ ಕಾರ್ಡ್‌ಗಳಲ್ಲಿ ನಮೂದಿಸಿ, ಮುಂದೆ ಯಾವುದೇ ಅಪರಾಧ ಕೃತ್ಯಗಳಲ್ಲಿ ತೊಡಗದಂತೆ ಎಚ್ಚರಿಕೆ ನೀಡಲಾಗುತ್ತಿದೆ.

10) ಠಾಣಾ ಸರಹದ್ದಿನ ಬೀಟ್ ಮತ್ತು ಉಪ-ಬೀಟ್‌ಗಳ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕ ಸಂಪರ್ಕ ಸಭೆಗಳನ್ನು ಮಾಡಿ ಅಪರಾಧ ತಡೆಗಳ ಬಗ್ಗೆ ಎಚ್ಚರ ವಹಿಸುವ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಲಾಗಿದೆ. ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆದು ಕಳ್ಳತನ ಮಾಡುವುದು, ಬಸ್‌ಗಳಲ್ಲಿ ಸೂಟ್‌ಕೇಸ್ ಕಳ್ಳತನ ಮಾಡುವವರ ಮೇಲೆ ಸೂಕ್ತ ಗಮನ ಹರಿಸುವಂತೆ ಸಾರ್ವಜನಿಕರಲ್ಲಿ ಹಾಗೂ ಪ್ರಯಾಣಿಕರಲ್ಲಿ ಮನವಿ ಮಾಡಲಾಗಿರುತ್ತದೆ ಹಾಗೂ ಸಾರ್ವಜನಿಕರಿಂದ ಅಪರಾಧ ತಡೆಯ ಬಗ್ಗೆ ಮಾಹಿತಿ ಪಡೆದು ಇಂತಹ ಅಪರಾಧಗಳು ನೆಡೆಯದಂತೆ ಸೂಕ್ತ ಗಮನ ಹರಿಸಲಾಗಿದೆ.

11) ವಯೋವೃದ್ದರು, ಒಂಟಿ ಮಹಿಳೆಯವರು ನೆಲೆಸಿರುವವರ ಬಗ್ಗೆ ಅಧಿಕಾರಿ ಮತ್ತು ಸಿಬ್ಬಂಗಳಿಂದ ಸರ್ವೆ ನಡೆಸಿ ಠಾಣಾ ಸರಹದ್ದಿನಲ್ಲಿರುವ ಒಂಟಿ ಮಹಿಳೆಯರನ್ನು ಗುರುತಿಸಿ ಇವರುಗಳ ಬಗ್ಗೆ ಸೂಕ್ತ ಗಮನ ನೀಡುವಂತೆ ಚೀತಾ, ಹೊಯ್ಸಳ ಬೀಟ್ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಿದ್ದು, ಇವರುಗಳ ಮನೆಗಳಿಗೆ ಸೈರನ್ ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.

12) ಠಾಣೆಯ ಅಪರಾಧ ಸಿಬ್ಬಂದಿಗಳಿಗೆ ಕೇಂದ್ರ ಕಾರಾಗೃಹದ ಬಳಿ ಹೋಗಿ ಕಾರಾಗೃಹದಿಂದ ಬಿಡುಗಡೆಯಾಗಿರುವ ಹಳೆ ಎಂ.ಓ ಆಸಾಮಿಗಳು, ರೌಡಿ ಆಸಾಮಿಗಳ ಬಗ್ಗೆ ಮಾಹಿತಿ ಪಡೆದುಕೊಂಡು ಅವರುಗಳ ಮೇಲೆ ಸೂಕ್ತ ನಿಗಾ ಇಡುವಂತೆ ತಿಳಿಸಲಾಗಿರುತ್ತದೆ. ಠಾಣಾ ಸರಹದ್ದಿನ ಶಾಲೆಗಳಿಗೆ ಭೇಟಿಕೊಟ್ಟು ವಿದ್ಯಾರ್ಥಿಗಳಿಗೆ ಅಪರಾಧಗಳನ್ನು ತಡೆಗಟ್ಟುವ ಮತ್ತು ಪತ್ತೆಮಾಡುವ ವಿಷಯದಲ್ಲಿ ಪೊಲೀಸರೊಡನೆ ಸಹಕರಿಸಬೇಕಾದ ವಿಷಯದ ಬಗ್ಗೆ ಹಾಗೂ ಸಾಮಾನ್ಯ ಜ್ಞಾನದ ಬಗ್ಗೆ ಉಪನ್ಯಾಸ ನೀಡಲಾಗಿರುತ್ತದೆ.

13) ಪೊಲೀಸ್ ಠಾಣೆಗಳ ಹೊಯ್ಸಳ ವಾಹನದಲ್ಲಿ ಮೆಗಾ ಪೋನ್‌ಗಳ ಮೂಲಕ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಸಾರ್ವಜನಿಕರು ಅನುಸರಿಸಬೇಕಾದ ವಿಷಯದಲ್ಲಿ ಮಾಹಿತಿಯನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡುವಂತೆ ಸಂಬಂದಪಟ್ಟ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿರುತ್ತದೆ.

14) ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಮನೆಗಳ ಬಳಿ ವಾಹನಗಳನ್ನು ನಿಲ್ಲಿಸುವಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹಾಗೂ ಬ್ಯಾಂಕ್‌ಗಳಿಂದ ಹೆಚ್ಚಿನ ಹಣವನ್ನು ನಗದೀಕರಣ ಮಾಡಿಕೊಂಡು ಹೋಗುವಾಗ ತೆಗೆದುಕೊಳ್ಳಬೇಕಾದ ಸುರಕ್ಷತೆಯ ಬಗ್ಗೆ, ಮನೆಗಳಲ್ಲಿ ಹೆಚ್ಚು ನಗದು ಹಾಗೂ ಆಭರಣಗಳನ್ನು

ಹೊಂದಿರುವವರು ಅವುಗಳನ್ನು ಸ್ಥಳೀಯ ಬ್ಯಾಂಕ್ ಲಾಕರ್‌ಗಳಲ್ಲಿ ಇಡುವಂತೆ ಚೀತಾ, ಹೊಯ್ಸಳ, ಬೀಟ್ ಮತ್ತು ಉಪ-ಬೀಟ್ ಸಿಬ್ಬಂದಿಗಳ ಮುಖಾಂತರ ಜಾಗೃತಿ ಮೂಡಿಸಲಾಗುತ್ತಿದೆ. ಬ್ಯಾಂಕ್‌ಗಳ ಮ್ಯಾನೇಜರ್‌ಗಳನ್ನು ಬೇಟಿ ಮಾಡಿ ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್‌ಗಳ ದುರುಪಯೋಗ ಮುಂತಾದ ಅಪರಾಧಗಳ ಬಗ್ಗೆ ಚರ್ಚಿಸಿ, ಇಂತಹ ಅಪರಾಧ ತಡೆಯುವ ಬಗ್ಗೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.

15) ಠಾಣಾ ಸರಹದ್ದಿನ ಪ್ರಮುಖ ಪಾರ್ಕ್‌ಗಳ ಬಳಿಗೆ ಹೋಗಿ ಪಾಂಪ್ಲೇಟ್ಸ್‌ಗಳನ್ನು ನೀಡಿ ವಾಯು ವಿಹಾರಕ್ಕೆ ಬರುವ ಸಾರ್ವಜನಿಕರುಗಳಿಗೆ ತಮ್ಮ ಮೈಮೇಲಿರುವ ಬಂಗಾರದ ಆಭರಣಗಳು, ಮೊಬೈಲ್ ಫೋನ್‌ಗಳು ಹಾಗೂ ಇತರೆ ಬೆಲೆ ಬಾಳುವ ವಸ್ತುಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸದಂತೆ ಹಾಗೂ ಒಂಟಿಯಾಗಿ ಓಡಾಡದಂತೆ, ಅಪರಿಚಿತ ಜನರುಗಳ ಮಾತಿಗೆ ಮರಳಾಗದೆ, ಅನುಮಾನಾಸ್ಪದ ಆಸಾಮಿಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.

16) ಠಾಣಾ ಸರಹದ್ದಿನಲ್ಲಿ ಭಯೋತ್ಪಾದನಾ ಕೃತ್ಯಗಳಲ್ಲಿ ಬಾಗಿಯಾಗಿರುವವರ ಹಾಗೂ ಭಯೋತ್ಪಾದಕರಿಗೆ ಸಹಾಯ ಮಾಡುವವರ ವಿಷಯದಲ್ಲಿ ಬಾತ್ಮೀಧಾರರಿಗೆ ಮಾಹಿತಿ ಸಂಗ್ರಹಿಸುವಂತೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ. ಸರಹದ್ದಿನಲ್ಲಿ ವಾಸವಾಗಿರುವ ಸಾರ್ವಜನಿಕರಿಗೆ ಹಾಗೂ ಅಂಗಡಿ ಮಾಲೀಕರುಗಳಿಗೆ ಕೆಲಸಕ್ಕೆ ನೌಕರರನ್ನು ನೇಮಕ ಮಾಡಿಕೊಳ್ಳುವ ಮೊದಲು ಅವರುಗಳ ಪೂರ್ವಪರಗಳನ್ನು ತಿಳಿದುಕೊಂಡು ಅಪರಾಧಗಳನ್ನು ಪತ್ತೆಮಾಡಲು ಸಹಕರಿಸುವಂತೆ ತಿಳುವಳಿಕೆ ನೀಡಲಾಗಿರುತ್ತದೆ.

17) ಅಪರಾಧ ತಡೆಗಟ್ಟಲು ಹಾಗೂ ಕಮ್ಯೂನಿಟಿ ಪೊಲೀಸಿಂಗ್ ವ್ಯವಸ್ಥೆ ಬಗ್ಗೆ ಅರಿವು ಮೂಡಿಸಲು ಸಾರ್ವಜನಿಕರಿಗೆ ಮೇಲ್ಕಂಡಂತೆ ತಿಳುವಳಿಕೆ ಮೂಡಿಸಿ ಈ ಸಂಬಂಧ ಕರಪತ್ರಗಳನ್ನು ಪ್ರಕಟಿಸಿ ವಿತರಿಸಲಾಗಿದ್ದು, ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲು ವ್ಯವಸ್ಥೆ ಮಾಡಿ ಪೊಲೀಸಿಂಗ್ ಪರಿಕಲ್ಪನೆಯನ್ನು ಜಾರಿಗೆ ತರಲು ಮೇಲ್ಕಂಡ ಎಲ್ಲಾ ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

***

# ಅನುಬಂಧ -೨

| ಕ್ರ. ಸಂ. | ಪೊಲೀಸ್ ಠಾಣೆ ಹೆಸರು | ಸುಧಾರಿತ ಗಸ್ತು/ಬೀಟ್ ವ್ಯವಸ್ಥೆಯ ನಂತರ ನಿಗದಿಗೊಳಿಸಿದ ಬೀಟ್‌ಗಳ ಸಂಖ್ಯೆ. |
|---|---|---|
| 1. | ಉಪ್ಪಾರಪೇಟೆ | 17 |
| 2. | ಸಿಟಿ ಮಾರ್ಕೆಟ್ | 16 |
| 3. | ಕಲಾಸಿಪಾಳ್ಯ | 20 |
| 4. | ಕಾಟನ್‌ಪೇಟೆ | 21 |
| 5. | ಚಾಮರಾಜಪೇಟೆ | 18 |
| 6. | ಜೆ.ಜೆ.ನಗರ | 20 |
| 7. | ಬ್ಯಾಟರಾಯನಪುರ | 16 |
| 8. | ಚಂದ್ರಾಲೇಔಟ್ | 20 |
| 9. | ರಾಜರಾಜೇಶ್ವರಿನಗರ | 20 |
| 10. | ಜ್ಞಾನಭಾರತಿ | 30 |
| 11. | ಅನ್ನಪೂರ್ಣೇಶ್ವರಿನಗರ | 30 |
| 12. | ಕೆಂಗೇರಿ | 25 |
| 13. | ವಿಜಯನಗರ | 16 |
| 14. | ಮಾಗಡಿರಸ್ತೆ | 30 |
| 15. | ಕೆ.ಪಿ.ಅಗ್ರಹಾರ | 20 |
| 16. | ಬಸವೇಶ್ವರನಗರ | 26 |
| 17. | ಕಾಮಾಕ್ಷಿಪಾಳ್ಯ | 20 |
| 18. | ಬ್ಯಾಡರಹಳ್ಳಿ | 20 |

| | | |
|---|---|---|
| 19. | ಜಯನಗರ | 32 |
| 20. | ಜೆ.ಪಿ ನಗರ | 20 |
| 21. | ಸಿದ್ದಾಪುರ | 22 |
| 22. | ಬಸವನಗುಡಿ | 23 |
| 23. | ಬನಶಂಕರಿ | 24 |
| 24. | ಸುಬ್ರಮಣ್ಯಪುರ | 27 |
| 25. | ಕೆ.ಎಸ್.ಲೇಔಟ್ | 25 |
| 26. | ಕೋಣನಕುಂಟೆ | 28 |
| 27. | ಪುಟ್ಟೇನಹಳ್ಳಿ | 24 |
| 28. | ತಲಘಟ್ಟಪುರ | 33 |
| 29. | ವಿ.ವಿ.ಪುರಂ | 32 |
| 30. | ಶಂಕರಪುರ | 12 |
| 31. | ಕೆ.ಜಿ.ನಗರ | 20 |
| 32. | ಹನುಮಂತನಗರ | 30 |
| 33. | ಗಿರಿನಗರ | 30 |
| 34. | ಸಿ.ಕೆ.ಅಚ್ಚುಕಟ್ಟು | 32 |
| 35. | ಹಲಸೂರು | 8 |
| 36. | ಇಂದಿರಾನಗರ | 8 |
| 37. | ಬೈಯಪ್ಪನಹಳ್ಳಿ | 7 |
| 38. | ಜೆ.ಬಿ.ನಗರ | 8 |
| 39. | ಪುಲಕೇಶಿನಗರ | 8 |

| | | |
|---|---|---|
| 40. | ಭಾರತೀನಗರ | 4 |
| 41. | ಶಿವಾಜಿನಗರ | 4 |
| 42. | ಕಮರ್ಷಿಯಲ್ ಸ್ಟ್ರೀಟ್ | 7 |
| 43. | ಬಾಣಸವಾಡಿ | 9 |
| 44. | ಆರ್.ಎಂ.ನಗರ | 9 |
| 45. | ಕೆ.ಜಿ.ಹಳ್ಳಿ | 10 |
| 46. | ಡಿ.ಜೆ.ಹಳ್ಳಿ | 6 |
| 47. | ಹೆಣ್ಣೂರು | 10 |
| 48. | ಪಿಳ್ಳಣ್ಣಗಾರ್ಡನ್ | 16 |
| 49. | ಎಸ್.ಆರ್.ನಗರ | 19 |
| 50. | ಎಸ್.ಜೆ.ಪಾರ್ಕ್ | 18 |
| 51. | ಹಲಸೂರುಗೇಟ್ | 18 |
| 52. | ಶೇಷಾದ್ರಿಪುರಂ- | 18 |
| 53. | ಹೈಗ್ರೌಂಡ್ಸ್- | 18 |
| 54. | ಸದಾಶಿವನಗರ- | 18 |
| 55. | ವೈಯಾಲಿಕಾವಲ್- | 20 |
| 56. | ಅಶೋಕ ನಗರ | 17 |
| 57. | ಕಬ್ಬನ್‌ಪಾರ್ಕ್ | 22 |
| 58. | ವಿವೇಕ ನಗರ | 17 |
| 59. | ವಿಧಾನ ಸೌಧ | 24 |
| 60. | ಮಲ್ಲೇಶ್ವರಂ | 6 |

| | | |
|---|---|---|
| 61. | ಶ್ರೀರಾಂಪುರ | 5 |
| 62. | ರಾಜಾಜಿನಗರ | 6 |
| 63. | ಸುಬ್ರಮಣ್ಯನಗರ | 4 |
| 64. | ಮಹಾಲಕ್ಷ್ಮಿ ಲೇಔಟ್ | 7 |
| 65. | ನಂದಿನಿಲೇಔಟ್ | 9 |
| 66. | ರಾಜಗೋಪಾಲನಗರ | 6 |
| 67. | ಯಶವಂತಪುರ | 6 |
| 68. | ಆರ್‌ಎಂಸಿಯಾರ್ಡ್ | 6 |
| 69. | ಪೀಣ್ಯ | 6 |
| 70. | ಜಾಲಹಳ್ಳಿ | 4 |
| 71. | ಗಂಗಮ್ಮಗುಡಿ | 5 |
| 72. | ಸೋಲದೇವನಹಳ್ಳಿ | 6 |
| 73. | ಬಾಗಲಗುಂಟೆ | 8 |
| 74. | ಜೆ.ಸಿ.ನಗರ | 4 |
| 75. | ಆರ್.ಟಿ.ನಗರ | 8 |
| 76. | ಸಂಜಯನಗರ | 5 |
| 77. | ಹೆಬ್ಬಾಳ | 4 |
| 78. | ಮೈಕೋಲೇಔಟ್ | 38 |
| 79. | ತಿಲಕ್ ನಗರ | 60 |
| 80. | ಬೊಮ್ಮನಹಳ್ಳಿ | 40 |
| 81. | ಸುದ್ದಗುಂಟೆಪಾಳ್ಯ | 30 |

| | | |
|---|---|---|
| 82. | ಹೆಚ್.ಎಸ್.ಆರ್. ಲೇಔಟ್ | 34 |
| 83. | ಆಡುಗೋಡಿ | 33 |
| 84. | ಕೋರಮಂಗಲ | 32 |
| 85. | ಮಡಿವಾಳ | 33 |
| 86. | ಬಂಡೇಪಾಳ್ಯ | 25 |
| 87. | ಬೇಗೂರು | 25 |
| 88. | ಎಲೆಕ್ಟ್ರಾನಿಕ್ ಸಿಟಿ | 30 |
| 89. | ಹುಳಿಮಾವು | 32 |
| 90. | ಪರಪ್ಪನ ಅಗ್ರಹಾರ | 35 |
| 91. | ವಿದ್ಯಾರಣ್ಯಪುರ | 07 |
| 92. | ಯಲಹಂಕ ನ್ಯೂ ಟೌನ್ | 07 |
| 93. | ಯಲಹಂಕ | 08 |
| 94. | ಕೊಡಿಗೇಹಳ್ಳಿ | 07 |
| 95. | ಅಮೃತಹಳ್ಳಿ | 07 |
| 96. | ಬಾಗಲೂರು | 06 |
| 97. | ಕೊತ್ತನೂರು | 08 |
| 98. | ಸಂಪಿಗೆಹಳ್ಳಿ | 05 |
| 99. | ದೇವನಹಳ್ಳಿ | 05 |
| 100. | ಚಿಕ್ಕಜಾಲ | 05 |
| 101. | ಬಿಐಎಎಲ್ | 03 |
| 102. | ಕಾಡುಗೋಡಿ | 8 |
| 103. | ಕೆ.ಆರ್.ಪುರಂ | 10 |

| | | |
|---|---|---|
| 104. | ವರ್ತೂರು | 5 |
| 105. | ಬೆಳ್ಳಂದೂರು | 6 |
| 106. | ಹೆಚ್.ಎ.ಎಲ್. | 8 |
| 107. | ಮಾರತ್ತಹಳ್ಳಿ | 6 |
| 108. | ಮಹದೇವಪುರ | 10 |
| 109. | ವೈಟ್ ಫೀಲ್ಡ್ | 04 |
| **ಒಟ್ಟು** | | **1799** |